ಅ) ರಸ್ತೆ ನಿರ್ಮಿಸಿದ ನಂತರ ಅದರ ಸುವ್ಯವಸ್ಥೆಯನ್ನು ಇಲಾಖೆ ಮುಂದಾದರೂ ಕಾಯ್ದುಕೊಂಡು ಬರುವುದೇ ?

ಇ) ಮಿನುಗಾರಿಕಾ ರಸ್ತೆಗಳ ಸುವ್ಯವಸ್ಥೆ ಬಗ್ಗೆ ನಿಗದಿತ ಮೊತ್ತವನ್ನು ಕಾಯ್ದಿರಿಸುವ ಪ್ರಸ್ತಾಪವು ಸರ್ಕಾರದ ಮುಂದೆ ಇದೆಯೇ ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) ಸಾಕಷ್ಟು ನಿರ್ವಹಣಾ ಅನುದಾನ ಲಭ್ಯತೆ ಇಲ್ಲದ ಕಾರಣ ಮಿನುಗಾರಿಕಾ ರಸ್ತೆಗಳ ಸುವ್ಯವಸ್ಥೆಯನ್ನು ಕಾಪಾಡಲು ಆಗಿಲ್ಲ.

ಆ) ನಿರ್ವಹಣೆ ಅನುದಾನದ ಲಭ್ಯತೆಗೆ ಅನುಸಾರವಾಗಿ ಸುವ್ಯವಸ್ಥೆಯನ್ನು ಕಾಯ್ದುಕೊಂಡು ಬರಲಾಗುವುದು.

ಇ) - ಇದೇ -

ಕುಂದಾಪುರ ತಾಲ್ಲೂಕು ಕೊಡೇರಿಯಲ್ಲಿ ಮೀನುಗಾರಿಕಾ ಬಂದರು ನಿರ್ಮಾಣ

1094 (513) ಶ್ರೀ ಗೋಪಾಲ ಪೂಜಾರಿ ಕೆ. (ಬೈಂದೂರು) ಮಾನ್ಯ ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಉಡುಪಿ ಜಿಲ್ಲೆ ಕುಂದಾಪುರ ತಾಲ್ಲೂಕಿನ ಕೊಡೇರಿಯಲ್ಲಿ ಮೀನುಗಾರಿಕಾ ಕಿರು ಬಂದರನ್ನು ನಿರ್ಮಿಸುವ ವಿಚಾರ ಸರಕಾರದ ಪರಿಶೀಲನೆಯಲ್ಲಿ ಇದೆಯೇ ?

ಆ) ಇದ್ದಲ್ಲಿ, ಅದನ್ನು ಯಾವಾಗ ಕೈಗೆತ್ತಿಗೊಳ್ಳಲಾಗುವುದು ?

ಶ್ರೀ ವಸಂತ ವಿ. ಸಾಲಿಯಾನ (ಮೀನುಗಾರಿಕೆ ಹಾಗೂ ಬಂದರು ರಾಜ್ಯ ಸಚಿವರು) :

ಅ) - ಹೌದು -

ಆ) ಆರ್.ಐ.ಡಿ.ಎಫ್. ಯೋಜನೆಯಲ್ಲಿ ಕೊಡೇರಿಯಲ್ಲಿ ರೂ. 31.00 ಲಕ್ಷದ ವೆಚ್ಚದಲ್ಲಿ ಮೀನುಗಾರಿಕಾ ಇಳಿದಾಣವನ್ನು ನಿರ್ಮಿಸಲು ಅನುಮೋದನೆಯನ್ನು ನೀಡಲಾಗಿದೆ. ಅಂದಾಜುಪಟ್ಟಿಯನ್ನು ನಬಾರ್ಡ್ ಮಂಜೂರಾತಿಗಾಗಿ ಸಲ್ಲಿಸಲಾಗಿದೆ. ಮಂಜೂರಾತಿ ದೊರೆತ ನಂತರ ಕಾಮಗಾರಿಯನ್ನು ಕೈಗೆತ್ತಿಕೊಳ್ಳಲಾಗುವುದು.

ರೇಷ್ಮೆ ಮಾರುಕಟ್ಟೆಯಲ್ಲಿನ ಅವ್ಯವಹಾರ

1095 (1500) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ರೇಷ್ಮೆ ಮತ್ತು ಜವಳಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ಬೆಂಗಳೂರು ಗ್ರಾಮಾಂತರ, ಮೈಸೂರು ಮತ್ತು ಕೋಲಾರ ಜಿಲ್ಲೆಗಳ ರೇಷ್ಮೆ ಗೂಡಿನ ಮಾರುಕಟ್ಟೆ ಯಾರ್ಡುಗಳಲ್ಲಿ ಕಳೆದ 3 ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ ಎಷ್ಟು ಮತ್ತು ಅವರ ಹೆಸರುಗಳ ವಿವರ ನೀಡುವುದು ?

ಆ) ಸದರಿ ಮಾರುಕಟ್ಟೆ ಯಾರ್ಡುಗಳಲ್ಲಿ, ಅಕ್ರಮ ವ್ಯವಹಾರ ನಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದಲ್ಲಿ ಅಂಥ ಅಕ್ರಮ ವ್ಯವಹಾರಗಳಲ್ಲಿ ಭಾಗಿಯಾದ ಅಧಿಕಾರಿಗಳು ಯಾರು ಮತ್ತು ಅಂತಹ ಅಧಿಕಾರಿಗಳ ವಿರುದ್ಧ ಸರ್ಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ಹೆಚ್.ಎಂ. ರೇವಣ್ಣ (ರೇಷ್ಮೆ ಮತ್ತು ಜವಳಿ ಸಚಿವರು) :

ಅ) ಮೂರು ಜಿಲ್ಲೆಗಳ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ಕಳೆದ ಮೂರು ವರ್ಷಗಳಿಂದ ಕಾರ್ಯ ನಿರ್ವಹಿಸುತ್ತಿರುವ ಅಧಿಕಾರಿಗಳ ಸಂಖ್ಯೆ 4, ವಿವರ ಕೆಳಕಂಡಂತಿದೆ.

	ಅಧಿಕಾರಿಯ ಹೆಸರು (ಶ್ರೀಯುತರು)	ಸ್ಥಳ	ಯಾವ ದಿನಾಂಕದಿಂದ ಕಾರ್ಯ ನಿರ್ವಹಿಸುತ್ತಿದ್ದಾರೆ
1.	ಷಫೀಕ್ ಅಹ್ಮದ್. ಕೆ. (ಪತ್ರಾಂಕಿತ ವ್ಯವಸ್ಥಾಪಕರು)	ರೇ.ಗೂ.ಮಾ ಕೋಲಾರ	20-06-1996
2.	ವೆಂಕಟಪ್ಪ ಜಿ. (ರೇಷ್ಮೆ ಸಹಾಯಕ ನಿರ್ದೇಶಕರು)	ರೇ.ಗೂ.ಮಾ. ಕೋಲಾರ	14-08-1998
3.	ಈಶ್ವರಪ್ಪ ಎಸ್. (ರೇಷ್ಮೆ ಸಹಾಯಕ ನಿರ್ದೇಶಕರು)	ರೇ.ಗೂ.ಮಾ ಚಿಂತಾಮಣಿ	19-08-1998
4.	ಕೆಂಪೇಗೌಡ ಬಿ.ಸಿ. (ರೇಷ್ಮೆ ಉಪನಿರ್ದೇಶಕರು)	ರೇ.ಗೂ.ಮಾ ರಾಮನಗರ	02-02-2000

ಆ) 1. ಕೋಲಾರ ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ರೇಷ್ಮೆ ಗೂಡು ವಹಿವಾಟು ಆಗದಿದ್ದರೂ ರೇಷ್ಮೆ ಕೂಡು ವಹಿವಾಟು ಆಗಿರುವುದಾಗಿ ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದು ಅಧಿಕಾರಿ ಮತ್ತು ನೌಕರರನ್ನು ಅಮಾನತ್ತುಗೊಳಿಸಲಾಗಿತ್ತು.

2. ಬೆಂಗಳೂರು ಗ್ರಾಮಾಂತರ ಜಿಲ್ಲೆ ವಿಜಯಪುರ ರೇಷ್ಮೆ ಬೆಳೆಗಾರರಿಗೆ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಪ್ರೋತ್ಸಾಹಧನ ಪಾವತಿಸುವಲ್ಲಿ ಇಲಾಖೆಯ ಸುತ್ತೋಲೆ ಆದೇಶಗಳನ್ನು ಪಾಲಿಸದಿರುವುದನ್ನು ಇಲಾಖೆಯ ಅಧಿಕಾರಿಗಳ ಸಮಿತಿಯ ತನಿಖೆಯಲ್ಲಿ ಕಂಡುಬಂದಿದೆ.

ಇ) ಕೋಲಾರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಗೂಡಿನ ವಹಿವಾಟು ನಡೆಯದಿದ್ದರೂ ವಹಿವಾಟು ನಡೆದಿರುವುದಾಗಿ ಸುಳ್ಳು ದಾಖಲೆ ಸೃಷ್ಟಿಸಿ ಅವ್ಯವಹಾರ ನಡೆಸಿದ್ದ ಬಗ್ಗೆ ವರದಿಯನ್ವಯ, ಕಾರಣರಾದ ಈ ಕೆಳಕಂಡ ಅಧಿಕಾರಿ : ನೌಕರರನ್ನು ಅಮಾನತ್ತಿನಲ್ಲಿಡಲಾಗಿತ್ತು.

1.	ಶ್ರೀ ಜೆ.ಎಂ. ಶಂಕರಯ್ಯ	ರೇಷ್ಮೆ ಸಹಾಯಕ ನಿರ್ದೇಶಕ
2.	ಶ್ರೀ ಎಂ. ಶ್ರೀನಿವಾಸ್	ರೇಷ್ಮೆ ನಿರೀಕ್ಷಕ
3.	ಶ್ರೀ ಎಸ್.ಬಿ. ಗೌಡರ್	ರೇಷ್ಮೆ ನಿರೀಕ್ಷಕ
4.	ಶ್ರೀ ಬೈರೇಗೌಡ	ರೇಷ್ಮೆ ನಿರೀಕ್ಷಕ
5.	ಶ್ರೀ ಬಿ.ಪಿ. ವೆಂಕಟರಮಣಾಚಾರಿ	ರೇಷ್ಮೆ ಪ್ರದರ್ಶಕ
6.	ಶ್ರೀ ಎ.ವಿ. ಶ್ರೀನಿವಾಸಗೌಡ	'ಡಿ' ವೃಂದದ ನೌಕರ

ಆನಂತರ ಇವರುಗಳನ್ನು ದಿನಾಂಕ: 15.02.03ರ ಆದೇಶದಲ್ಲಿ ಇಲಾಖಾ ವಿಚಾರಣೆ ಬಾಕಿ ಇರಿಸಿ ಮರು ನೇಮಕ ಮಾಡಲಾಗಿದೆ.

ವಿಜಯಪುರ ರೇಷ್ಮೆ ಗೂಡಿನ ಮಾರುಕಟ್ಟೆಯಲ್ಲಿ ಪ್ರೋತ್ಸಾಹ ಧನ ಪಾವತಿಗೆ ಸಂಬಂಧಿಸಿದಂತೆ ಮಾರ್ಗದರ್ಶನ : ಸುತ್ತೋಲೆಗಳನ್ನು ಪಾಲಿಸದಿರುವ ವಿಷಯ ಗಮನಿಸಲಾಗಿದ್ದು,

ಈ ಮಾರುಕಟ್ಟೆಯ ಅಧಿಕಾರಿಗಳಾದ ಶ್ರೀ ಡಿ.ವಿ. ವಿಷ್ಣುಕುಮಾರ್, ರೇಷ್ಮೆ ಉಪ ನಿರ್ದೇಶಕ, ಶ್ರೀ ಎಂ.ವಿ. ಚಂದ್ರು, ರೇಷ್ಮೆ ಸಹಾಯಕ ನಿರ್ದೇಶಕ, ಹಾಗೂ ಶ್ರೀ ಎ. ಹನುಮಂತಯ್ಯ, ರೇಷ್ಮೆ ವಿಸ್ತರಣಾಧಿಕಾರಿ ಹಾಗೂ ನೌಕರರುಗಳಾದ ಶ್ರೀ ಎಂ.ವಿ. ಶ್ರೀನಿವಾಸ್, ರೇಷ್ಮೆ ಪ್ರವರ್ತಕ (ಸಂ) ಶ್ರೀ ಮುನಿಶ್ಯಾಮಪ್ಪ, ದಿನಗೂಲಿ ನೌಕರ ಇವರುಗಳನ್ನು ದಿನಾಂಕ: 7.3.2003ರ ಆದೇಶದಲ್ಲಿ ಇಲಾಖಾ ವಿಚಾರಣೆ ಕಾಯ್ದಿರಿಸಿ ಅಮಾನತ್ತಿನಲ್ಲಿಡಲಾಗಿದೆ.

ರಾಜ್ಯದಲ್ಲಿ ಪರವಾನಗಿ ಇಲ್ಲದೆ ನಡೆಯುತ್ತಿರುವ ಗಣಿಕೈಗಾರಿಕೆಗಳು

1096 (1501) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) ಮಾನ್ಯ ಗಣಿ ಮತ್ತು ಭೂವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?

ಅ) ರಾಜ್ಯದಲ್ಲಿ ಪರವಾನಗಿ ಇಲ್ಲದೆ ನಡೆಯತಕ್ಕ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು ; ಮತ್ತು ಮೈಸೂರು ತಾಲ್ಲೂಕಿನಲ್ಲಿ ಪರವಾನಗಿ ಇಲ್ಲದೆ ನಡೆಯತಕ್ಕ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು ?

ಆ) ಈ ರೀತಿ ಪರವಾನಗಿ ಇಲ್ಲದೆ ಗಣಿ ಕೈಗಾರಿಕೆಗಳನ್ನು ನಡೆಸುವವರು ಯಾರು ಯಾರು ?

ಇ) ಸರ್ಕಾರೀ ಜಮೀನಿನಲ್ಲಿ ನಡೆಯತಕ್ಕ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು ಹಾಗೂ ಖಾಸಗಿ ಮತ್ತು ರೆವಿನ್ಯೂ ಜಮೀನಿನಲ್ಲಿ ನಡೆಯತಕ್ಕ ಗಣಿ ಕೈಗಾರಿಕೆಗಳ ಸಂಖ್ಯೆ ಎಷ್ಟು ?

ಈ) ಪರವಾನಗಿ ಇಲ್ಲದೇ ನಡೆಸತಕ್ಕಂತಹ ಗಣಿ ಕೈಗಾರಿಕೆಗಳವರ ವಿರುದ್ಧ ಸರಕಾರ ತೆಗೆದುಕೊಂಡ ಕ್ರಮಗಳೇನು ?

ಉ) ಮೈಸೂರು ಜಿಲ್ಲೆಯಲ್ಲಿ ಕಾನೂನು ಬಾಹಿರವಾಗಿ ಗಣಿ ಕೈಗಾರಿಕೆಗಳನ್ನು ಯಾರು ಯಾರು ನಡೆಸುತ್ತಿದ್ದಾರೆ ಹಾಗೂ ಅಂಥವರ ವಿರುದ್ಧ ಸರಕಾರ ತೆಗೆದುಕೊಂಡ ಕ್ರಮಗಳೇನು ?

ಶ್ರೀ ವಿ. ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಸಚಿವರು) :

ಅ) ರಾಜ್ಯದಲ್ಲಿ 416 ಸ್ಥಳಗಳಲ್ಲಿ ಪರವಾನಿಗೆ ಇಲ್ಲದೆ ನಡೆಯುತ್ತಿದ್ದ ಗಣಿಗಾರಿಕೆಯನ್ನು ಗುರುತಿಸಿ ಅವುಗಳ ಚಟುವಟಿಕೆಯನ್ನು ನಿಲ್ಲಿಸಲಾಗಿದೆ. ಮೈಸೂರು ತಾಲ್ಲೂಕಿನಲ್ಲಿ ಪರವಾನಿಗೆ ಇಲ್ಲದೆ ನಡೆಯುತ್ತಿದ್ದ ಗಣಿಗಾರಿಕೆಗಳ ಸಂಖ್ಯೆ : 5.

ಆ) ಕಟ್ಟಡದ ಕಲ್ಲಿಗಾಗಿ, ಕಲ್ಲಿನ ಕೆಲಸವನ್ನೇ ಜೀವನೋಪಾಯಕ್ಕಾಗಿ ಅವಲಂಬಿಸಿರುವವರು ಅನಧಿಕೃತ ಗಣಿಗಾರಿಕೆಯನ್ನು ಮಾಡುತ್ತಿರುವುದು ಕಂಡು ಬಂದಿದೆ. ಕೆಲವು ಲಾರಿ ಮಾಲೀಕರು ಮರಳಿನ ಅನಧಿಕೃತ ಗಣಿಗಾರಿಕೆ ಮಾಡುವುದನ್ನು ಗುರುತಿಸಲಾಗಿದೆ. ಇದಲ್ಲದೆ ಕೆಲವರು ಪರವಾನಿಗೆಯನ್ನು ಪಡೆದು ಪರವಾನಿಗೆ ಇಲ್ಲದ ಇರುವ ಪ್ರದೇಶದಲ್ಲಿ ಗಣಿಗಾರಿಕೆ ಮಾಡುವುದನ್ನು ಗುರುತಿಸಿ ಗಣಿಗಾರಿಕೆಯನ್ನು ನಿಲ್ಲಿಸಲು ಕ್ರಮ ಕೈಗೊಳ್ಳಲಾಗಿದೆ.

ಇ) ರಾಜ್ಯದಲ್ಲಿ ಸರ್ಕಾರಿ (ರೆವಿನ್ಯೂ) ಜಮೀನಿನಲ್ಲಿ 6444 ಗಣಿ ಗುತ್ತಿಗೆಗಳನ್ನು ನೀಡಲಾಗಿದೆ. ಖಾಸಗಿ ಜಮೀನಿನಲ್ಲಿ 290 ಗಣಿ ಗುತ್ತಿಗೆಗಳನ್ನು ನೀಡಲಾಗಿದೆ.

ಈ) ರಾಜ್ಯದಲ್ಲಿ ಅಕ್ರಮ ಗಣಿ ಕಾರ್ಯ ನಡೆಸುತ್ತಿದ್ದವರಿಗೆ ನೋಟೀಸ್ ಜಾರಿ ಮಾಡಿ ಅಕ್ರಮ ಗಣಿಗಾರಿಕೆಯನ್ನು ತಡೆಗೈಲಾಗಿದೆ. ಅಕ್ರಮ ಗಣಿಗಾರಿಕೆ ನಡೆಸಿ, ಅಕ್ರಮ ಖನಿಜ ಸಾಗಾಣಿಕೆ ಮಾಡುತ್ತಿದ್ದ ವಾಹನಗಳನ್ನು ತಪಾಸಣೆ ಮಾಡಿ ರೂ. 170 ಲಕ್ಷ ದಂಡ ವಸೂಲಿ ಮಾಡಲಾಗಿದೆ.